# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು-570 006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-02/776/2026-27 ದಿನಾಂಕ: 13.05.2026

## ಅಧಿಸೂಚನೆ

**ವಿಷಯ:** ಉಪಕುಲಸಚಿವ ಹುದ್ದೆಯ ಪದೋನ್ನತಿಗೆ ಆಯ್ಕೆ ಮಾಡಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಹ ಅಧಿಕಾರಿಗಳಿಂದ ಅರ್ಜಿಯನ್ನು ಆಹ್ವಾನಿಸುವ ಬಗೆಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13.05.2026.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಉಪಕುಲಸಚಿವ ಹುದ್ದೆಗಳನ್ನು ಸ್ಥಾನಪನ್ನ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಪರಿನಿಯಮಗಳನ್ವಯ ಪದೋನ್ನತಿಗೆ ಆಯ್ಕೆ ಮಾಡಲು ಕರಾಮುವಿ ನಿಲಯದ ಅರ್ಹ ಅಧಿಕಾರಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳನ್ವಯ ಉಪಕುಲಸಚಿವ ಹುದ್ದೆಯ ಪದೋನ್ನತಿಗೆ ನೇಮಕಾತಿ ಮಂಡಳಿಯ ಮೂಲಕ ಆಯ್ಕೆ ಮಾಡಲಾಗುವುದು.

ಈ ಸಂಬಂಧ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಹ ಅಧಿಕಾರಿಗಳು ಅರ್ಜಿಯನ್ನು ಭರ್ತಿ ಮಾಡಿ 08ಪ್ರತಿಗಳಲ್ಲಿ(08ಸೆಟ್) ಪೂರಕ ದಾಖಲಾತಿಗಳೊಂದಿಗೆ(ನಕಲು) ಸ್ವಯಂ ದೃಢೀಕರಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

ವಿ.ವಿ ನಿಲಯದ ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ **"ಉಪಕುಲಸಚಿವ ಹುದ್ದೆಗಾಗಿ ಅರ್ಜಿ"** ಎಂದು ಲಕೋಟೆಯ ಮೇಲೆ ನಮೂದಿಸಿ **ಕುಲಸಚಿವರ ಕಛೇರಿಗೆ ದಿನಾಂಕ20.05.2026ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸುವಂತೆ ತಿಳಿಸಲಾಗಿದೆ.

ಆದೇಶದ ಮೇರೆಗೆ

**ಕುಲಸಚಿವ**

**ಮಾಹಿತಿಗಾಗಿ:**

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಹ ಅಧಿಕಾರಿಗಳ ಗಮನಕ್ಕೆ
2. ಎಲ್ಲಾ ಶಾಸನಬದ್ಧ ಅಧಿಕಾರಿಗಳ ಗಮನಕ್ಕೆ-ತಮ್ಮ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಧಿಕಾರಿಗಳ ಗಮನಕ್ಕೆ ತರಲು ಕೋರಿದೆ.

**ಪ್ರತಿ,**

1. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು - ವಿ.ವಿ ನಿಲಯದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
2. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
4. ಆಡಳಿತ ವಿಭಾಗದ ಸೂಚನಾ ಫಲಕಕ್ಕೆ
5. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.

## ಅರ್ಜಿ ನಮೂನೆ

ಗೆ,

**ಕುಲಸಚಿವರು**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತಗಂಗೋತ್ರಿ, ಮೈಸೂರು.**

ಮಾನ್ಯರೇ,

ದಿನಾಂಕ:______________ರಂದು ಉಪಕುಲಸಚಿವ ಹುದ್ದೆಯ ಪದೋನ್ನತಿಗಾಗಿ ಅರ್ಜಿ ಸಲ್ಲಿಸುವ ಬಗೆಗೆ ಹೊರಡಿಸಿರುವ ಅಧಿಸೂಚನೆಯನ್ನು ಆಧರಿಸಿ ಉಪಕುಲಸಚಿವ ಹುದ್ದೆಯ ಪದೋನ್ನತಿಗಾಗಿ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

**ಸೇವಾ ವಿವರ**

| ಕ್ರಮ ಸಂಖ್ಯೆ | ವಿವರ | ಮಾಹಿತಿ |
|---|---|---|
| 1 | ನೌಕರನ/ಳ ಹೆಸರು | |
| 2 | ಜಾತಿ/ವರ್ಗ | |
| 3 | ವಿಳಾಸ | |
| 4 | ಜನ್ಮ ದಿನಾಂಕ | |
| 5 | ವಿದ್ಯಾರ್ಹತೆ | |
| 6 | ವಿಶ್ವವಿದ್ಯಾನಿಲಯಕ್ಕೆ ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಹುದ್ದೆ | |
| 7 | ವಿಶ್ವವಿದ್ಯಾನಿಲಯವು ಪರೀಕ್ಷಾರ್ಥ ಅವಧಿ ಘೋಷಣೆ ಮಾಡಿದ ದಿನಾಂಕ | |
| 8 | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ, ಪಡೆಯುತ್ತಿರುವ ವೇತನ ಮತ್ತು ವೇತನ ಶ್ರೇಣಿ | |

| | | |
|---|---|---|
| 9 | **ಒಟ್ಟಾರೆ ಆಡಳಿತಾತ್ಮಕ ಅನುಭವ (ಹುದ್ದೆವಾರು ವಿವರ ನೀಡುವುದು)** | |
| 10 | **ಪ್ರಸ್ತುತ ಹುದ್ದೆಯಲ್ಲಿ ಸ್ಥಾನಪನ್ನಗೊಂಡ ನಂತರ ಸೇವಾ ಅನುಭವ (ವರ್ಷಗಳಲ್ಲಿ)ಯಾವ ದಿನಾಂಕದಿಂದ** | |
| 11 | **ಭಾಗವಹಿಸಿರುವ ಕಾರ್ಯಗಾರಗಳು/ ಶಿಬಿರಗಳ ವಿವರ** | |
| 12 | **ಇತರೆ** | |

ಮೇಲೆ ನೀಡಿರುವ ಮಾಹಿತಿಗಳು ಸರಿಯಾಗಿವೆ ಎಂದು ಪ್ರಮಾಣಿಕರಿಸುತ್ತೇನೆ.

**ನೌಕರನ/ಳ ಸಹಿ**

ಅಧಿಸೂಚನೆ ಸಂಖ್ಯೆ:ಕರಾಮುವಿ/______________________________ದಿನಾಂಕ:__________

ಉಪಕುಲಸಚಿವ ಹುದ್ದೆಯ ಪದೋನ್ನತಿಗಾಗಿ ಶ್ರೀ/ಶ್ರೀಮತಿ______________________________ ರವರು ಸಲ್ಲಿಸುತ್ತಿರುವ ಅರ್ಜಿಯನ್ನು ಸೂಕ್ತ ಕ್ರಮಕ್ಕಾಗಿ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು ಇವರಿಗೆ ರವಾನಿಸಲಾಗಿದೆ.

ಸಂಬಂಧಪಟ್ಟವಿಭಾಗದ ಮುಖ್ಯಸ್ಥರ ಸಹಿ
ಮತ್ತು ಮೊಹರು